ಕರ್ನಾಟಕ ಸರ್ಕಾರ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ (ಪ್ರಾದೇಶಿಕ), ಬೆಂಗಳೂರು
E-mail- cfbangalore.hg@gmail.com

ವನವಿಕಾಸ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003
ದೂರವಾಣಿ-080-23344686

ಸಂಖ್ಯೆ: ಎ11/ಭೂಮಿ/ಸಿಆರ್-68/2021-22 ದಿನಾಂಕ: 28-12-2021

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ),
ಅರಣ್ಯ ಭವನ, ಬೆಂಗಳೂರು.

ಮಾನ್ಯರೆ,

ವಿಷಯ: Ex- Post facto approval for diversion of 7.814 Ha of Forest land in Doddamannugudde Village Sy No. 1, Kasaba Hobli, Ramanagra Taluk and District for already constructed Government Engineering College in favour of the Principal, Government Engineering College, Near Janapadaloka, Ramanagara.
**Proposal No. FP/KA/OTHERS/34662/2018**

ಉಲ್ಲೇಖ:
1. ಈ ಕಛೇರಿಯ ಪತ್ರ ಸಂಖ್ಯೆ: ಎ11/ಮೇಲ್ಮನವಿ-284/2016-17 ದಿನಾಂಕ: 06-06-2018
2. ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ರವರ ಕಛೇರಿ ಪತ್ರ ಸಂಖ್ಯೆ: ಎ5/ಎಲ್‌ಎನ್‌ಡಿ/ಎಫ್.ಸಿ/ಸಿಆರ್-140/2019-20/1325, ದಿನಾಂಕ: 16-12-2021

*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಪಯೋಗಿ ಸಂಸ್ಥೆಯವರಾದ The Principal, Government Engineering College, Ramanagara ಇವರು ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಮಣ್ಣುಗುಡ್ಡೆ ಸರ್ವೆ ನಂ. 1 ರ ಅರಣ್ಯ ಪ್ರದೇಶದ 19-30 ಎಕರೆ/ಗುಂಟೆ ವಿಸ್ತೀರ್ಣದಲ್ಲಿ ಈಗಾಗಲೇ ನಿರ್ಮಾಣ ಮಾಡಲಾಗಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಸಂಬಂಧಿಸಿದಂತೆ, ಅರಣ್ಯ (ಸಂರಕ್ಷಣೆ) ಕಾಯ್ದೆ, 1980 ರಡಿಯಲ್ಲಿ Ex-Post facto ಅನುಮೋದನೆಗಾಗಿ ಭಾಗ-1 ರಲ್ಲಿ ಸಲ್ಲಿಸಲಾಗಿದ್ದ ಪ್ರಸ್ತಾವನೆಯ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ರವರು ಸ್ಥಳ ಪರಿಶೀಲನೆ ನಡೆಸಿ, ಈ ಕುರಿತಂತೆ ಉಲ್ಲೇಖ(2)ರ ಪತ್ರದಲ್ಲಿನ ವರದಿಯೊಂದಿಗೆ ಭಾಗ-2ರಲ್ಲಿ ಅಗತ್ಯ ಮಾಹಿತಿಗಳನ್ನು ಭರ್ತಿ ಮಾಡಿ ಸ್ಥಳ ಪರಿಶೀಲನಾ ವರದಿ ಮತ್ತು ಶಿಫಾರಸ್ಸು ಪತ್ರದೊಂದಿಗೆ ಪ್ರಸ್ತಾವನೆಯ ನಾಲ್ಕು (04) ಪ್ರತಿಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಉಪಯೋಗಿ ಸಂಸ್ಥೆಯವರು ದೊಡ್ಡಮಣ್ಣುಗುಡ್ಡೆ ಸರ್ವೆ ನಂ.1 ರ ಅರಣ್ಯ ಪ್ರದೇಶದ 19-30 ಎಕರೆ/ಗುಂಟೆ ವಿಸ್ತೀರ್ಣದಲ್ಲಿ ಅನಧಿಕೃತವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದ ಬಗ್ಗೆ ದಿನಾಂಕ: 27-05-2008ರಲ್ಲಿ ಅರಣ್ಯ ಮೊಕದ್ದಮೆಯನ್ನು ದಾಖಲಿಸಲಾಗಿದ್ದು, ಈ ಕುರಿತಂತೆ ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಾಯ್ದೆ 64(ಎ) ರಡಿಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ಉಪ ವಿಭಾಗ, ರಾಮನಗರ ಇವರು ನಡಾವಳಿಯನ್ನು ಕೈಗೊಂಡು, ವಿಚಾರಣೆ ನಡೆಸಿ ಮೇಲ್ಕಂಡ ಸರ್ಕಾರಿ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದ್ದ ಜಾಗವು ಅರಣ್ಯ ಅಧಿಸೂಚನೆ ಸಂಖ್ಯೆ: No.8 dt. 10.4.1884 & 422-Ft-F-15-1900 dt. 07.01.1901 ರನ್ವಯ ದೊಡ್ಡಮಣ್ಣುಗುಡ್ಡೆ ಸರ್ವೆ ನಂ. 01 ರ ರಾಜ್ಯ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸೇರುವುದಾಗಿ ಖಾತ್ರಿಪಡಿಸಿಕೊಂಡು, ದಿನಾಂಕ: 01-11-2016 ರಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸಂಸ್ಥೆಯವರಿಗೆ ಮೇಲ್ಕಂಡ ಅರಣ್ಯ ಒತ್ತುವರಿಯನ್ನು ತೆರವುಗೊಳಿಸುವಂತೆ ಆದೇಶ ಹೊರಡಿಸಿರುತ್ತಾರೆ.

ಈ ಕುರಿತಂತೆ ಉಪಯೋಗಿ ಸಂಸ್ಥೆಯವರು ಈ ಕೆಳಸಹಿದಾರರ ಕಛೇರಿಯ ಮೇಲ್ಮನವಿ ಪ್ರಾಧಿಕಾರದ ಮುಂದೆ ಮೇಲ್ಮನವಿಯನ್ನು (ಮೇಲ್ಮನವಿ ಸಂಖ್ಯೆ: 284/2016-17) ದಾಖಲು ಮಾಡಿದ್ದು, ದಿನಾಂಕ: 08-12-

2017ರಂದು ನಡೆದ ವಿಚಾರಣೆಯಲ್ಲಿ ಅನಧಿಕೃತವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದ್ದರ ಬಗ್ಗೆ ಅರಣ್ಯ (ಸಂರಕ್ಷಣೆ) ಕಾಯ್ದೆ, 1980 ರಡಿಯಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಕಾಲವಕಾಶವನ್ನು ಕೋರಿರುತ್ತಾರೆ. ಈ ಕುರಿತಂತೆ ಉಲ್ಲೇಖ(1)ರ ಈ ಕಛೇರಿಯ ಪತ್ರದಲ್ಲಿ ಈಗಾಗಲೇ ಸದರಿ ಪ್ರದೇಶದಲ್ಲಿ ಇಂಜಿನಿಯರಿಂಗ್ ಕಾಲೇಜು ನಡೆಯುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದರಿಂದ ಹಾಗೂ ಸದರಿ ಇಂಜಿನಿಯರಿಂಗ್ ಕಾಲೇಜು ಸರ್ಕಾರದ ಒಂದು ಅಂಗ ಸಂಸ್ಥೆಯಾಗಿರುವ ಕಾರಣ, ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಕೈಗೊಳ್ಳಬೇಕಾದ ಮುಂದಿನ ಕ್ರಮದ ಕುರಿತು ಸೂಕ್ತ ನಿರ್ದೇಶನವನ್ನು ಕೋರಲಾಗಿರುತ್ತದೆ ಮತ್ತು ಪ್ರಸ್ತುತ ಮೇಲ್ಮನವಿ ಪ್ರಕರಣವು ಅಂತಿಮ ಹಂತದಲ್ಲಿ ಬಾಕಿ ಇರುತ್ತದೆ.

ಆದ್ದರಿಂದ ಮೇಲ್ಕಂಡ ಅಂಶಗಳನ್ನು ಮಾನ್ಯರ ಗಮನಕ್ಕೆ ತರುತ್ತಾ, ಸದರಿ ಪ್ರಸ್ತಾವನೆಯ ಬಗ್ಗೆ ಈ ಕೆಳಸಹಿದಾರರ ಅಭಿಪ್ರಾಯವನ್ನು ಭಾಗ-3ರಲ್ಲಿ ನಮೂದಿಸಿ ಉಲ್ಲೇಖ(2)ರ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ರವರ ಪತ್ರದೊಂದಿಗೆ ಶಿಫಾರಸ್ಸು ವರದಿ ಹಾಗೂ ಸ್ಥಳ ಪರಿಶೀಲನಾ ವರದಿಯೊಂದಿಗೆ ಪ್ರಸ್ತಾವನೆಯ ಮೂರು ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸುತ್ತಾ, ಪ್ರಸ್ತಾಪಿತ ಕಾಲೇಜು ಸರ್ಕಾರದ ಒಂದು ಅಂಗ ಸಂಸ್ಥೆಯಾಗಿದ್ದು, ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಗಣಿಸಲು ಕೋರುತ್ತಾ, ಮುಂದಿನ ಸೂಕ್ತ ಕ್ರಮಕ್ಕಾಗಿ ಮಾನ್ಯರ ಅವಗಾಹನೆಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಪ್ರಾದೇಶಿಕ), ಬೆಂಗಳೂರು.

**PART-III**

**(To be filled by the concerned Chief Conservator of Forests)**

| | | |
|---|---|---|
| 14) | Whether site, where the forest land involved is located has been inspected by concerned Chief Conservator of Forests (Yes/No). If yes, the date of inspection and observations made in from of inspection note to be enclosed | Not inspected. |
| 15) | Whether the concerned Chief Conservator of Forests agree with the information given in Part-B and the recommendations of Deputy Conservator of Forests. | I agree with the reports of Deputy Conservator of Forests, Ramanagara Division, Ramanagara. |
| 16) | Specific recommendation of concerned Chief Conservator of Forests for acceptance or otherwise of the proposal with detailed reasons. | As per report of Deputy Conservator of Forests, Ramanagara Division, Ramanagara the Forest land proposed for diversion by the user agency is for the Post-facto approval for diversion of 7.814 Ha of Forest land in Doddamannugudde Village Sy No. 1, Kasaba Hobli, Ramanagra Taluk and District for already constructed Government Engineering College in favour of the Principal, Government Engineering College, Ramanagara.<br><br>As per the site inspection report of Deputy Conservator of Forests, Ramanagara in the proposed area one building is already constructed and other building constructions are in progress.<br><br>Since the proposal is in the interest of Education and public utility the proposal for the Post-facto approval can be accepted. |

**Date: 28-12-2021.**
**Place: Bengaluru**

**Chief Conservator of Forests,**
**(Territorial) Bengaluru.**

Vijay/English Letter/1